

ಉಕ್ರೇನಿನ ಮಿಲಿಟರಿ ನೇಮಕಾತಿ ಕೇಂದ್ರದಲ್ಲಿ ಸಮವಸ್ತ್ರ ವಿತರಿಸುವ ರೀತಿ ನೋಡಿ. ಉಡುಪಿನ ಕರಾರುವಾಕ್ ಅಳತೆ ಪಡೆಯಲು ಎಂಥ ನಿಯಮ ಅನುಸರಿಸುತ್ತಾರೆಂದರೆ ಭಾವಿ ಸೈನಿಕರು ಯುದ್ಧದ ಬದಲು ಆಯ್ಕೆ ಪ್ರಕ್ರಿಯೆ ನೋಡಿಯೇ ಹೆದರಿ ಹಿಮ್ಮೆಟ್ಟಬೇಕು.

ಇಸ್ರೇಲಿನ ರೈಲಿನ ಮೇಲೆ ಟೆಲ್ ಅವೀವ್ ವಿವಿ ಪ್ರೊಫೆಸರ್ 'ಐನ್‌ಸ್ಟೀನ್‌ನ ಪ್ರೇಮ ಪತ್ರಗಳು' ಕುರಿತು ಉಪನ್ಯಾಸ ನೀಡಿದರಂತೆ. ಮೊಬೈಲ್ ಕಿವಿಗೊತ್ತಿ, ದಿನಪತ್ರಿಕೆ ಕಣ್ಣಿಗೊತ್ತಿ ಕೂರುವ ಪ್ರಯಾಣಿಕರಿಗೆ ಉನ್ನತ ಶಿಕ್ಷಣವನ್ನು ತಲೆಗೊತ್ತುವ ಪ್ರಯೋಗ ಅಲ್ಲಿ ಶುರುವಾಗಿದೆ. ನಮ್ಮ 'ಗಾಲಿ ಮೇಲೆ ಅರಮನೆ'ಗಿಂತ ಅಲ್ಲಿಯ 'ಗಾಲಿ ಮೇಲೆ ಶಾಲೆ' ಎಷ್ಟು ದಿನ ಓಡುತ್ತದೊ!






ಪುರುಷರಿಗೆ ಮೂತ್ರಬಾಧೆಯಾದಾಗ ಆಪದ್ಬಾಂಧವ ಗೋಡೆ ಅಥವಾ ಪಾದಚಾರಿ ಮಾರ್ಗ. ಆದರೆ ಪ್ರಯಾಣಿಸುವ ಮಹಿಳೆಯರಿಗೆ ಶೌಚಾಲಯ ಕಾಣದಿದ್ದರೆ.. ಅದಕ್ಕೇ ಈ ಗೋ ಗರ್ಲ್ ಸಲಕರಣೆಗಳು ಮಾರುಕಟ್ಟೆಗೆ ಬಂದಿವೆ. ಪುರುಷರಿಗೂ 'ಗೋ ಬಾಯ್ಸ್' ಯಾಕೆ ಕಂಡುಹಿಡಿಯಬಾರದು? ಗೋಡೆಗಳಾದರೂ ಬಚಾವ್ ಆಗುತ್ತವೆ.

ವಾಹನ ಚಾಲನೆ ಪರವಾನಗಿ ಪಡೆಯಲು ಒಬ್ಬ ವ್ಯಕ್ತಿ ಎಷ್ಟು ಬಾರಿ ಲಿಖಿತ ಪರೀಕ್ಷೆಗೆ ಕೂತಿರಬಹುದು? ನೂರು.. ಇನ್ನೂರು? ದ.ಕೊರಿಯಾದ 68ರ ಮಹಿಳೆ ಚಾ ಸಾ-ಸೂನ್‌ಗೆ ಇದು ನಾಟ್ ಸೋ ಸೂನ್. ಆಕೆ 950ನೇ ಯತ್ನದಲ್ಲಿ ಉತ್ತೀರ್ಣಳಾಗಿದ್ದು ಪರೀಕ್ಷಾ ಶುಲ್ಕಕ್ಕೇ 4500 ಡಾಲರ್ ಖರ್ಚು ಮಾಡಿದ್ದಾಳೆ. ಮುಂದೆ ಚಾಲನಾ ಪ್ರಾಯೋಗಿಕ ಪರೀಕ್ಷೆಯೆಂಬ ಇನ್ನೊಂದು ಪರೀಕ್ಷೆ ಭೂತ ಬಾಕಿಯಿದೆ. ಕಣ್ಣು, ಕಿವಿ ಎಲ್ಲಾ ಸರಿ ಮಾಡಿಸಿಕೊಳ್ಳಲು ಇನ್ನೆಷ್ಟು ಡಾಲರ್ ಬೇಕೋ!

ನ್ಯೂಜಿಲಂಡ್ ಕಲಾವಿದನೊಬ್ಬನಿಗೆ ಪರಿಸರ ಸಚಿವನ ಮೇಲೆ ಸಿಟ್ಟು ಬಂತು. ಕೈಗೆ ಹಸುವಿನ ಸಗಣಿ ತೆಗೆದುಕೊಂಡ. ಸಚಿವನ ಮುಖದ ಮೇಲೆ ಬಿಸಾಕಿದನಾ? ಇಲ್ಲ, ಸಚಿವನ ಬೊಂಬೆ ಮಾಡಿದ. ಅದಕ್ಕೀಗ 2200 ಡಾಲರ್ ಕೊಟ್ಟು ಯಾರೋ ಖರೀದಿ ಮಾಡಿದ್ದಾರಂತೆ.



ಚೀನಿಯರಿಗೆ ಬೀಜಿಂಗ್ ಒಲಿಂಪಿಕ್ ಜ್ವರ ಇನ್ನೂ ವಾಸಿಯಾದ ಹಾಗಿಲ್ಲ. ಒಲಿಂಪಿಕ್ ಸ್ಮರಣಿಕೆ ಎಂದು ಕಂಡ ಕಸವನ್ನೆಲ್ಲಾ ಪ್ರದರ್ಶನಕ್ಕಿಟ್ಟು ಕಾಸು ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಕ್ರೀಡಾಳುಗಳಿಗೆ ಹಂಚಿದ್ದ 5000 ಕಾಂಡೋಮ್‌ಗಳನ್ನು ಯಾರೋ ಒಬ್ಬ ಸಂಗ್ರಹಿಸಿ ಹರಾಜಿಗಿಟ್ಟಿದ್ದಾನಂತೆ. ಇವು ಬಳಸಿದ್ದೋ, ಹಾಗೇ ಬಿಸಾಡಿದ್ದೋ ಗೊತ್ತಾಗಿಲ್ಲ.

ನ್ಯೂಜೆರ್ಸಿಯ ಏಟ್ಸ್ ತನ್ನ ಮೇಲಿನ ಕೊಲೆ ಆರೋಪದಿಂದ ಪಾರಾಗಲು ವಿಚಿತ್ರ ವಾದ ಮಂಡಿಸಿದ್ದಾನೆ. ಮೂರು ವರ್ಷಗಳ ಹಿಂದೆ ಆತನ ಅಳಿಯ ಕೊಲೆಯಾದಾಗ ಏಟ್ಸ್ ತೂಕ 285 ಪೌಂಡ್. ಅಷ್ಟೊಂದು ದಢೂತಿ ದೇಹ ಹೊತ್ತುಕೊಂಡು ಮಹಡಿ ಮೇಲೆ ಹೋಗಿ ಗುಂಡು ಹಾರಿಸಿ ತಪ್ಪಿಸಿಕೊಂಡು ಓಡಲು ಸಾಧ್ಯವೇ ಎಂಬುದು ಏಟ್ಸ್ ವಾದ.

ಮನುಷ್ಯರಿಗಿಂತ ರಷ್ಯಾದ ಮಂಗಗಳೇ ಅದೃಷ್ಟಶಾಲಿಗಳು. ಎಚ್1ಎನ್1 ಮುನ್ನೆಚ್ಚರಿಕೆಗೆ ಮನುಷ್ಯರು ಬಾಯಿಗೆ ಮಾಸ್ಕ್ ಕಟ್ಟಿಕೊಂಡರೆ ಅಲ್ಲಿಯ ಮೃಗಾಲಯದ ಮಂಗಗಳ ಮೂತಿಗೆ ಮದ್ಯದ ಬಾಟಲ್ ಹಿಡಿಯಲಾಗುತ್ತಿದೆ. ರೆಡ್ ವೈನ್ ಕುಡಿಸಿದರೆ ಈ ಜ್ವರ ದೂರ ಓಡುತ್ತಂತೆ.

